ಓ ಎಸ್ 248 -2006, ಡಿಡಬ್ಲ್ಯು 7, ರಾದ ಎಸ್ ಪುರಾಣಿಕ್ ಸಾಕ್ಷಿಯನ್ನು ದಿಃ 07.12.2018 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ 15 ನೇ ಪ್ರತಿವಾದಿ ಪರ ಶ್ರೀ ಪಿ ಎಲ್ ಕೆ ವಕೀಲರಿಂದಃ

ನಾನು ಈ ಕೇಸಿನಲ್ಲಿ 15 ನೇ ಪ್ರತಿವಾದಿ ಇರುತ್ತೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ.

ದಾವಾ ಸೈಟಿ ನಂಬರ್ 14 ಅನ್ನು ಖರೀದಿ ಮಾಡಿದ್ದ ಬಗ್ಗೆ ಕ್ರಯ ಪತ್ರದ ದೃಢಿಕೃತ ನಕಲನ್ನು ನಿಡಿ. 72 ಎಂದು, ಮಹಾನಗರ ಪಾಲಿಕೆಯವರು ನೀಡಿದ ಖಾತ ಪತ್ರವನ್ನು ನಿಡಿ 73 ಎಂದು, 9 ನೇ ಪ್ರತಿವಾದಿ ಖರೀದಿ ಮಾಡಿದ ಸೈಟ್ 14 ಕ್ಕೆ ಸಂಬಂಧಪಟ್ಟಂತೆ ಟೈಟಲ್ ಡೀಡ್ ನ ದೃಢಿಕೃತ ನಕಲನ್ನು ನಿಡಿ.74 ಎಂದು, ಅದರಂತೆ ಲೀಸ್ ಕಂ ಸೇಲ್ ಡೀಡ್ ನ ದೃಢಿಕೃತ ನಕಲನ್ನು ನಿಡಿ. 75 ಎಂದು, ಸ್ವಾಧೀನ ಪತ್ರದ ದೃಢಿಕೃತ ನಕಲನ್ನು ನಿಡಿ. 76 ಎಂದು, ಎನ್ ಓ ಸಿ ಯ ದೃಢಿಕೃತ ನಕಲನ್ನು ನಿಡಿ. 77 ಎಂದು, ಖಾತಾ ಪತ್ರದ ದೃಢಿಕೃತ ನಕಲನ್ನು ನಿಡಿ .78, ಮುಡಾ ರವರು 9 ನೇ ಪ್ರತಿವಾದಿಗೆ ನೀಡಿದ ಉತ್ತರ ಪತ್ರದ ದೃಢಿಕೃತ ನಕಲನ್ನು ನಿಡಿ. 79, ಅಲಾಟ್ಮೆಂಟ್ ಫಾರಂ ನ ದೃಢಿಕೃತ ನಕಲನ್ನು ನಿಡಿ. 80, ಮೂರು ಟ್ಯಾಕ್ಸ ಪೇಡ್ ರಸೀತಿಗಳನ್ನು ಒಟ್ಟಾಗಿ ನಿಡಿ. 81, ಆಸ್ತಿಗೆ ತೆರಿಗೆ ಘೋಷಣೆ ಪ್ರಮಾಣ ಪತ್ರವನ್ನು ನಿಡಿ .82, ಮೂರು ಋಣಭಾರ ರಹಿತ ಪ್ರಮಾಣ ಪತ್ರಗಳ ದೃಢಿಕೃತ ನಕಲನ್ನು ನಿಡಿ. 83 ಎಂದು ಗುರುತಿಸಲಾಯಿತು.

ಆದುದರಿಂದ ನನ್ನ ದಾವೆಯನ್ನು ಪುರಸ್ಕರಿಸಬೇಕಾಗಿ ಕೋರುತ್ತೇನೆ.

ಪಾಟೀ ಸವಾಲುಃ ವಾದಿಯರ ಪರ ಶ್ರೀ ಆರ್ ಆರ್ ಎನ್ ವಕೀಲರಿಂದಃ

ವಕೀಲರ ಕೋರಿಕೆ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೆ. ಸರಿ ಇದೆ

ಸಹಿ/-
ಪ್ರಧಾನ ಲಘು ವ್ಯವಹಾರಗಳ ನ್ಯಾಯಾಧೀಶರು,
ಮತ್ತು ಎಂಎಸಿಟಿ, ಮೈಸೂರು